ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಾರ್ಯಾಲಯ, ರೊದ್ದ ರಸ್ತೆ, ಧಾರವಾಡ

## 2011-12 ನೇ ಸಾಲಿನ ವಿಭಾಗ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ

1. ಸಹ ಶಿಕ್ಷಕರ ವೃಂದದಲ್ಲಿ ಭಾಷಾ ಶಿಕ್ಷಕರು, ಪಿಸಿಎಂ, ಸಿಬಿಝಡ್, ಕಲಾ ಶಿಕ್ಷಕರು, ಶಿಕ್ಷಣ ಸಂಯೋಜಕರು ಟಿಜಿಟಿ, ಬಿಆರ್‌ಪಿ, ತಾಂತ್ರಿಕ ಸಹಾಯಕರು ಶಾಸಕರ ಮಾದರಿ ಶಾಲಾ ಪದವೀಧರ ಮುಖ್ಯ ಶಿಕ್ಷಕರು ಒಳಗೊಂಡಿರುತ್ತಾರೆ. ಈ ಎಲ್ಲಾ ಶಿಕ್ಷಕರನ್ನು ಒಟ್ಟುಗೂಡಿಸಿ ಆಧ್ಯತಾ ಪಟ್ಟಯನ್ನು ಸಿದ್ದಪಡಿಸಲಾಗಿದೆ. ಕಾರಣ ವೇಳಾಪಟ್ಟಿಯಲ್ಲಿ ಭಾಷಾ ಶಿಕ್ಷಕರಿಗೆ ಮತ್ತು ವಿಷಯ ಶಿಕ್ಷಕರಿಗೆ ಪ್ರತ್ಯೇಕವಾಗಿ ದಿನಾಂಕ ನಿಗದಿಪಡಿಸಿರುವುದನ್ನು ಬದಲಾಯಿಸಿ ಈ ಕೆಳಗೆ ನಮೂದಿಸಿದಂತೆ ಕೌನ್ಸಲಿಂಗ್ ನಡೆಸಲಾಗುವುದು.

## ಕೌನ್ಸಲಿಂಗ್ ವೇಳಾ ಪಟ್ಟಿ

**ಕೌನ್ಸಲಿಂಗ್ ನಡೆಯುವ ಸ್ಥಳ : ಆಯುಕ್ತಾಲಯದ ಆವರಣ ಡಯಟ್ ಪ್ರಾರ್ಥನಾ ಮಂದಿರದಲ್ಲಿ ಪ್ರತಿ ದಿನ ಮುಂ.10.00 ರಿಂದ**

**ದಿನಾಂಕ: 05-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಕ್ರಮ ಸಂಖ್ಯೆ: 01 ರಿಂದ 500

**ದಿನಾಂಕ: 06-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಕ್ರಮ ಸಂಖ್ಯೆ: 501 ರಿಂದ 1000.

**ದಿನಾಂಕ: 07-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಕ್ರಮ ಸಂಖ್ಯೆ: 1001 ರಿಂದ 1500

**ದಿನಾಂಕ: 08-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಕ್ರಮ ಸಂಖ್ಯೆ: 1501 ರಿಂದ 1815

**ದಿನಾಂಕ: 07-06-2011** ವಿಶೇಷ ಶಿಕ್ಷಕರ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಕ್ರಮ ಸಂಖ್ಯೆ: 01 ರಿಂದ 89

**ದಿನಾಂಕ: 08-06-2011** ದೈಹಿಕ ಶಿಕ್ಷಣ ಶಿಕ್ಷಕರ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಕ್ರಮ ಸಂಖ್ಯೆ: 01 ರಿಂದ 138.

## -: ವಿಶೇಷ ಸೂಚನೆಗಳು :-

1. ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ, ಶಿಕ್ಷಕರು ವರ್ಗಾವಣಾ ಅರ್ಜಿಸಲ್ಲಿಸುವಾಗ ಕೋರಿರುವ ಆದ್ಯತೆಯನ್ನು ಪರಿಗಣಿಸಿ ಆದ್ಯತಾ ಪಟ್ಟಿ ಸಿದ್ಧಪಡಿಸಲಾಗಿದೆ. ಶಿಕ್ಷಕರು ಕೌನ್ಸಲಿಂಗ್‌ಗೆ ಹಾಜರಾಗುವಾಗ ಆದ್ಯತೆಯನ್ನು ಪುಷ್ಠೀಕರಿಸುವ ದಾಖಲೆಗಳನ್ನು ತಪ್ಪದೇ ವರ್ಗಾವಣಾ ಪ್ರಾಧಿಕಾರಕ್ಕೆ ಹಾಜರುಪಡಿಸುವುದು. ತಪ್ಪಿದಲ್ಲಿ ಶಿಕ್ಷಕರು ವರ್ಗಾವಣಾ ಕೌನ್ಸಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅನರ್ಹರಾಗುತ್ತಾರೆ. ಬೇರೆ ಯಾವುದೇ ಆದ್ಯತಾ ಗುಂಪಿನಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ.

2. ಕರ್ನಾಟಕ ರಾಜ್ಯ ಸಿವಿಲ್ ಸೇವಾ [ಶಿಕ್ಷಕರ ವರ್ಗಾವಣಾ ನಿಯಂತ್ರಣ] ನಿಯಮಗಳು 2007 ರ 15ನೇ ನಿಯಮದಡಿ ವರ್ಗಾವಣೆಗೊಂಡು ಬಿಡುಗಡೆಯಾದ ಶಿಕ್ಷಕರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಅವರು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸ್ಥಳದಲ್ಲಿನ ನಿಲುಗಡೆ ಅವಧಿ ಕನಿಷ್ಠ 3 ವರ್ಷ ಪೂರೈಸಿರತಕ್ಕದ್ದು.

3. ಘಟಕದ ಹೊರಗೆ ವರ್ಗಾವಣೆ ಬಯಸಿದ ಸಹ ಶಿಕ್ಷಕರು [ಇತರೆ ಮಹಿಳೆ ಮತ್ತು ಇತರೆ ಪುರುಷ] ದಿನಾಂಕ 04-05-2005ಕ್ಕೆ 5 ವರ್ಷಗಳ ಸೇವೆಯನ್ನು ಪೂರ್ಣಗೊಳಿಸದೇ ಇರುವವರು ವರ್ಗಾವಣೆ ಹೊಂದಲು ಅರ್ಹರಾಗುವುದಿಲ್ಲ. ಅಂತಹ ಶಿಕ್ಷಕರು ಒಂದು ವೇಳೆ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಯಲ್ಲಿ ಸೇರ್ಪಡೆಯಾಗಿದಲ್ಲಿ ವರ್ಗಾವಣೆಗೆ ಪರಿಗಣಿಸುವುದಿಲ್ಲ.

**ಸಹನಿರ್ದೇಶಕರು [ಆಡಳಿತ] ಹಾಗೂ**
**ವರ್ಗಾವಣಾ ಪ್ರಾಧಿಕಾರಿಗಳು ಆಯುಕ್ತರ ಕಾರ್ಯಾಲಯ**
**ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.**

**ಪ್ರಕಟಣೆಯ ದಿನಾಂಕ** : 03-06-2011